# ನವೆಂಬರ್ 2ನೇ ವಾರ ಕೃಷಿ ಮೇಳ

## ಅಧಿಕ ಇಳುವರಿಯ ಜೋಳ, ಅಲಸಂದೆ, ಸೂರ್ಯಕಾಂತಿ ಲೋಕಾರ್ಪಣೆಗೆ ಭಾರಿ ಸಿದ್ಧತೆ

## ಬೆಳೆ ಸಂರಕ್ಷಣೆ, ಕಳೆ ನಿರ್ವಹಣೆ, ಉತ್ಪಾದನೆ ಸೇರಿ 17 ನೂತನ ತಾಂತ್ರಿಕತೆಗಳ ಅನಾವರಣ

• ಸಿದ್ದು ಚಿಕ್ಕಬಳ್ಳೇಕೆರೆ
**ಕನ್ನಡಪ್ರಭ ವಾರ್ತೆ** ಬೆಂಗಳೂರು

ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಪ್ರತಿವರ್ಷ ಹೆಬ್ಬಾಳದ ಜಿಕೆವಿಕೆಯಲ್ಲಿ ಆಯೋಜಿಸುವ ಬಹು ನಿರೀಕ್ಷಿತ 'ಕೃಷಿ ಮೇಳ' ಈ ಬಾರಿ ನವೆಂಬರ್ ಎರಡನೇ ವಾರದಲ್ಲಿ ನಡೆಯುವ ಸಾಧ್ಯತೆಯಿದ್ದು, 4 ಹೊಸ ತಳಿ, 17 ನೂತನ ತಾಂತ್ರಿಕತೆ, 2 ವಿಭಿನ್ನ ಯಂತ್ರಗಳ ಲೋಕಾರ್ಪಣೆಗೆ ಸಿದ್ಧತೆ ನಡೆದಿದೆ.

ಬರಗಾಲದಲ್ಲೂ ಅಧಿಕ ಇಳುವರಿ ನೀಡುವ ಮತ್ತು ರೋಗ ನಿರೋಧಕ ಶಕ್ತಿ ಹೆಚ್ಚಾಗಿರುವ ಸೂರ್ಯಕಾಂತಿ, ಮುಸುಕಿನ ಜೋಳ, ಅಲಸಂದೆ ಮತ್ತು ನೇಪಿಯರ್‌ನ ನೂತನ ತಳಿಗಳನ್ನು ಸಂಶೋಧಿಸಿದ್ದು, ಕೃಷಿ ಮೇಳದಲ್ಲಿ ಬಿಡುಗಡೆಯಾಗಲಿವೆ. ಒಕ್ಕಣಿಕೆಯನ್ನು ಸರಳವಾಗಿಸುವ ಎರಡು ಸುಧಾರಿತ ಕೃಷಿ ಯಂತ್ರಗಳನ್ನೂ ಸಂಶೋಧಿಸಲಾಗಿದೆ. ಜತೆಗೆ, ಬೆಳೆ ಸಂರಕ್ಷಣೆ, ಕಳೆ ನಿರ್ವಹಣೆ, ಉತ್ಪಾದನೆ ಮತ್ತಿತರ ವಿಭಾಗಗಳಲ್ಲಿ ಒಟ್ಟು 17 ನೂತನ ತಾಂತ್ರಿಕತೆಗಳನ್ನು ಕೃಷಿಮೇಳದಲ್ಲಿ ಅನಾವರಣಗೊಳಿಸಲಾಗುವುದು.

**ರೋಗ ನಿರೋಧಕತೆಯ ಅಲಸಂದೆ:** ಅಲಸಂದೆಯ ಸಿ-152 ತಳಿಯನ್ನು ರೈತರು ಹೆಚ್ಚಾಗಿ ಬೆಳೆಯುತ್ತಿದ್ದು, ಹೆಕ್ಟೇರ್‌ಗೆ ಎಂಟು ಕ್ವಿಂಟಾಲ್ ಇಳುವರಿ ಪಡೆಯುತ್ತಿದ್ದರು. ಆದರೆ ಇದಕ್ಕೆ ರೋಗ ಬಾಧೆ ಹೆಚ್ಚಾಗಿತ್ತು. ಆದ್ದರಿಂದ ಕೆಬಿಸಿ-12 ಎಂಬ 80 ದಿನಕ್ಕೆ ಕಟಾವು ಮಾಡುವ ಹೊಸ ತಳಿ ಅಭಿವೃದ್ಧಿಪಡಿಸಿದ್ದು ಹೆಕ್ಟೇರ್‌ಗೆ 13 ರಿಂದ 14 ಕ್ವಿಂಟಾಲ್ ಇಳುವರಿ ಬರಲಿದೆ. ಬೇಸಿಗೆ ಮತ್ತು ಮುಂಗಾರಿನಲ್ಲೂ ಬೆಳೆಯಬಹುದು. ಅಂಗಮಾರಿ ರೋಗ, ನಂಜಾನು ಹಾಗೂ ಬೇರು ಕೊಳೆ ರೋಗಕ್ಕೆ ನಿರೋಧಕ ಶಕ್ತಿಯನ್ನು ಈ ಹೊಸ ತಳಿ ಹೊಂದಿದೆ. ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ತುಮಕೂರು, ಮಂಡ್ಯ, ಚಾಮರಾಜನಗರ, ಮೈಸೂರು ಮತ್ತಿತರ ಜಿಲ್ಲೆಗಳಲ್ಲಿ ಈ ತಳಿಯನ್ನು ಬೆಳೆಯಬಹುದು ಎಂದು ಮಂಡ್ಯ ವಿ.ಸಿ.ಫಾರಂನ ಪ್ರಧಾನ ವಿಜ್ಞಾನಿ ಡಾ| ಎಚ್.ಸಿ.ಲೋಹಿತಾಶ್ವ ತಿಳಿಸಿದ್ದಾರೆ.

ಮೇವಿಗೆ ಸಂಬಂಧಿಸಿದಂತೆ 'ಬಾಜ್ರ ನೇಪಿಯರ್ ಪಿಬಿಎನ್-342' ತಳಿಯನ್ನೂ ಸಂಶೋಧಿಸಲಾಗಿದ್ದು, ಹೆಕ್ಟೇರ್‌ಗೆ 1497 ಕ್ವಿಂಟಾಲ್ ಹಸಿರು ಮೇವಿನ ಇಳುವರಿ ಬರಲಿದೆ. ಒಣ ಮೇವಿನಲ್ಲಿ 204 ಕ್ವಿಂಟಾಲ್ ಇಳುವರಿ ಸಿಗಲಿದೆ, ಅಗಲವಾದ ಎಲೆಗಳನ್ನು ಹೊಂದಿದೆ. ಕಾಂಡ ಮೃದುವಾಗಿದೆ. ಸಸಾರ ಜನಕವೂ ಅಧಿಕವಾಗಿದ್ದು, ಗುಣ ಮಟ್ಟದ ಪೌಷ್ಠಿಕಾಂಶ ಒಳಗೊಂಡಿದೆ.

### ಅಧಿಕ ಎಣ್ಣೆ ಅಂಶದ ಸೂರ್ಯಕಾಂತಿ




ಸೂರ್ಯಕಾಂತಿಯ ಕೆಬಿಎಸ್‌ಎಚ್-90 ತಳಿಯನ್ನು ಕೃಷಿ ವಿವಿ ಆವಿಷ್ಕರಿಸಿದ್ದು, ಅಧಿಕ ಇಳುವರಿಯ ಜೊತೆಗೆ ಎಣ್ಣೆಯ ಅಂಶವೂ ಹೆಚ್ಚಾಗಿರುವುದು ಇದರ ವಿಶೇಷವಾಗಿದೆ. 80 ದಿನಗಳ ಅಲ್ಪಾವಧಿ ತಳಿ ಇದಾಗಿದ್ದು, ಮಧ್ಯಮ ಎತ್ತರ ಹೊಂದಿದೆ. ಹೆಕ್ಟೇರ್‌ಗೆ 23 ರಿಂದ 24 ಕ್ವಿಂಟಾಲ್ ಇಳುವರಿ ಬರಲಿದೆ.

### ಬಹುಪಯೋಗಿ ಮುಸುಕಿನ ಜೋಳ



ಮುಸುಕಿನ ಜೋಳದ ಬಹುಪಯೋಗಿ ಎಂಎಚ್ 15-84 ತಳಿಯನ್ನೂ ಅಭಿವೃದ್ಧಿಪಡಿಸಲಾಗಿದೆ. ಕಾಳು, ಹಸಿಮೇವು, ಪಾಶ್ಚರೀಕರಿಸಿದ ಬಳಕೆಗೂ ಇದು ಸೂಕ್ತವಾಗಿದೆ. ಈವರೆಗೆ ಬಳಸುತ್ತಿದ್ದ ಎಂಎಚ್ 14-5 ತಳಿ ಹೆಕ್ಟೇರ್‌ಗೆ 81 ರಿಂದ 85 ಕ್ವಿಂಟಾಲ್ ಇಳುವರಿ ಬರುತ್ತಿತ್ತು. ಆದರೆ ಎಂಎಚ್ 15-84 ತಳಿಯು 92 ರಿಂದ 95 ಕ್ವಿಂಟಾಲ್ ಇಳುವರಿ ನೀಡಲಿದೆ. ರೋಗ ನಿರೋಧಕ ಶಕ್ತಿ ಅಧಿಕವಾಗಿದೆ.

> **ಬರ ಸಹಿಷ್ಣುವಾಗಿದ್ದು, ಅಧಿಕ ಇಳುವರಿ ನೀಡುವ, ರೋಗನಿರೋಧಕ ಶಕ್ತಿ ಹೆಚ್ಚಾಗಿರುವ ತಳಿಗಳ ಅಭಿವೃದ್ಧಿಗೆ ವಿವಿ ಆದ್ಯತೆ ನೀಡುತ್ತಿದೆ. ಇದರಿಂದಾಗಿ ರೈತರಿಗೆ ಬಹಳಷ್ಟು ಅನುಕೂಲವಾಗಲಿದೆ.**
>
> • **ಡಾ| ಎಸ್.ವಿ.ಸುರೇಶ**
> ಬೆಂಗಳೂರು ಕೃಷಿ ವಿವಿ ಕುಲಪತಿ

13-08-2024
Kannadaprabha
Pg 04

---


ಕ್ಯೂಆರ್ ಕೋಡ್ ಬಳಸಿ ಟಿಕೆಟ್ ಖರೀದಿಸಿರಿ | ಸೋಮವಾರ 34 ಸಾವಿರಕ್ಕೂ ಹೆಚ್ಚು ಮಂದಿ ವೀಕ್ಷಣೆ

# ಫಲಪುಷ್ಪ ಪ್ರದರ್ಶನಕ್ಕೆ ಆನ್‌ಲೈನ್ ಟಿಕೆಟ್ ವ್ಯವಸ್ಥೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಲಾಲ್‌ಬಾಗ್ ಫಲಪುಷ್ಪ ಪ್ರದರ್ಶನದಲ್ಲಿ ಸ್ವಾತಂತ್ರ್ಯೋತ್ಸವದಂದು (ಆ. 15) ಪ್ರದರ್ಶನ ವೀಕ್ಷಣೆಗೆ ಟಿಕೆಟ್ ಪಡೆಯಲು ಅನುಕೂಲವಾಗುವಂತೆ ಕ್ಯೂಆರ್ ಕೋಡ್ ಬಳಸಿ ಆನ್‌ಲೈನ್ ಟಿಕೆಟ್ ಪಡೆಯುವ ವ್ಯವಸ್ಥೆ ಕಲ್ಪಿಸಲಾಗಿದೆ. ಆ.15ರಂದು ಫ್ಲವರ್ ಶೋ ಲಕ್ಷಾಂತರ ಮಂದಿ ಭೇಟಿ ನೀಡಲಿದ್ದು, ಕೌಂಟರ್‌ಗಳಲ್ಲಿ ಟಿಕೆಟ್ ಪಡೆಯುವಾಗ ಉಂಟಾಗುವ ದಟ್ಟಣೆ ತಪ್ಪಿಸಲು ಹಾಗೂ ವೀಕ್ಷಕರು ಸುಲಭವಾಗಿ ಟಿಕೆಟ್ ಪಡೆಯಲು ಅನುಕೂಲವಾಗುವಂತೆ ಈ ವ್ಯವಸ್ಥೆ ಮಾಡಲಾಗಿದೆ ಎನ್ನುತ್ತಾರೆ ತೋಟಗಾರಿಕೆ ಇಲಾಖೆ ಅಧಿಕಾರಿಗಳು.

ಪ್ರದರ್ಶನದ ಎಲ್ಲ ದಿನಗಳಲ್ಲೂ ಆನ್‌ಲೈನ್‌ನಲ್ಲಿ ಟಿಕೆಟ್ ಬುಕಿಂಗ್‌ಗೆ ವ್ಯವಸ್ಥೆಯಿದೆ. ಆದರೆ ಆಗಸ್ಟ್ 14 ಮತ್ತು 15ರಂದು ಹೆಚ್ಚಿನ ವೀಕ್ಷಕರು ಆಗಮಿಸುವ ನಿರೀಕ್ಷೆಯಿದೆ. ಅಂತಹ ಸಂದರ್ಭದಲ್ಲಿ ಜನರನ್ನು ನಿಯಂತ್ರಿಸಲು ಈ ವ್ಯವಸ್ಥೆ ಅನುಕೂಲವಾಗಲಿದೆ. ಹೀಗಾಗಿ ಲಾಲ್‌ಬಾಗ್‌ಗೆ ಫಲಪುಷ್ಪ ಪ್ರದರ್ಶನಕ್ಕೆ ಬರುವವರು ಆನ್‌ಲೈನ್‌ನಲ್ಲೇ ಟಿಕೆಟ್ ಬುಕ್ ಮಾಡಿಕೊಂಡಲ್ಲಿ, ಮೊಬೈಲ್‌ನಲ್ಲಿ ಅದರ ಸ್ಕ್ರೀನ್ ಶಾರ್ಟ್ ತೋರಿಸಿ ಒಳ ಪ್ರವೇಶಿಸಬಹುದು ಎಂದು ಹೇಳಿದರು. ಆನ್‌ಲೈನ್ ಟಿಕೆಟ್ ಬುಕಿಂಗ್‌ಗಾಗಿ ಸಂಪರ್ಕಿಸುವ ವೆಬ್‌ಸೈಟ್: https://hasiru.karnataka.gov.in/flowershow/login.aspk . ಆನ್‌ಲೈನ್‌ನಲ್ಲಿ ಬುಕ್ ಮಾಡಿಕೊಂಡು ಬರುವವರಿಗೆ ಅದರ ಸ್ಕ್ರೀನ್ ಶಾರ್ಟ್ ಅನ್ನು ಪರಿಶೀಲಿಸಲು ಪ್ರವೇಶ ದ್ವಾರಗಳಲ್ಲಿ ಪ್ರತ್ಯೇಕ ಕೌಂಟರ್‌ಗಳನ್ನು ಕೂಡ ಮಾಡಲಾಗಿದೆ.



### ಒಂಬತ್ತು ಲಕ್ಷ ರೂ. ಸಂಗ್ರಹ

**ಸ್ವಾತಂತ್ರ್ಯೋತ್ಸವ ಅಂಗವಾಗಿ ಲಾಲ್‌ಬಾಗ್‌ನಲ್ಲಿ ಆಯೋಜಿಸಿರುವ 216ನೇ ಫಲಪುಷ್ಪ ಪ್ರದರ್ಶನಕ್ಕೆ ಸೋಮವಾರ 34 ಸಾವಿರ ಅಧಿಕ ವೀಕ್ಷಕರು ಭೇಟಿ ನೀಡಿದ್ದರು. ಇವರಲ್ಲಿ 18,550 ಮಂದಿ ಮಕ್ಕಳಾಗಿದ್ದು, ಉಳಿದಂತೆ 15,680 ಮಂದಿ ಹಿರಿಯರು ಪ್ರದರ್ಶನ ವೀಕ್ಷಿಸಿದ್ದಾರೆ. ಇದರೊಂದಿಗೆ 9 ಲಕ್ಷ ರೂ. ಸಂಗ್ರಹವಾಗಿದೆ ಎಂದು ತೋಟಗಾರಿಕೆ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.**

### ನಮ್ಮ ಮೆಟ್ರೋದಿಂದ ಪೇಪರ್ ಟಿಕೆಟ್

**ಬೆಂಗಳೂರು:** ಲಾಲ್‌ಬಾಗ್‌ನಲ್ಲಿ ನಡೆಯುತ್ತಿರುವ ಫಲಪುಷ್ಪ ವೀಕ್ಷಣೆಗೆ ಆಗಮಿಸುವ ಪ್ರಯಾಣಿಕರಿಗೆ ಅನುಕೂಲವಾಗುವಂತೆ ಆ.15, 17 ಹಾಗೂ 18ರಂದು ಲಾಲ್‌ಬಾಗ್ ಮೆಟ್ರೋ ನಿಲ್ದಾಣದಲ್ಲಿ ಟೋಕನ್ ಟಿಕೆಟ್‌ಗಳ ಬದಲಿಗೆ ರಿಟರ್ನ್ ಜರ್ನಿ ಪೇಪರ್ ಟಿಕೆಟ್‌ಗಳನ್ನು ವಿತರಿಸಲಾಗುತ್ತದೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ. 30 ರೂ. ಬೆಲೆಯ ರಿಟರ್ನ್ ಜರ್ನಿ ಪೇಪರ್ ಟಿಕೆಟ್‌ಗಳನ್ನು ಬೆಳಗ್ಗೆ 10ರಿಂದ ರಾತ್ರಿ 8ರವರೆಗೆ ವಿತರಿಸಲಾಗುತ್ತದೆ. ಈ ಟಿಕೆಟ್‌ಗಳನ್ನು ಬಳಸಿಕೊಂಡು ಲಾಲ್‌ಬಾಗ್ ಮೆಟ್ರೋ ನಿಲ್ದಾಣದಿಂದ ಯಾವುದೇ ಮೆಟ್ರೋ ನಿಲ್ದಾಣಕ್ಕೆ ಪ್ರಯಾಣಿಸಲು ಮಾನ್ಯವಾಗಿರುತ್ತದೆ. ಪ್ರಯಾಣಿಕರು ಟೋಕನ್, ಸ್ಮಾರ್ಟ್ ಕಾರ್ಡ್, ಕ್ಯೂಆರ್ ಟಿಕೆಟ್‌ಗಳ ಮೂಲಕ ಲಾಲ್‌ಬಾಗ್ ನಿಲ್ದಾಣಕ್ಕೆ ಪ್ರಯಾಣಿಸಬಹುದು. ಲಾಲ್‌ಬಾಗ್ ಮೆಟ್ರೋ ನಿಲ್ದಾಣದಿಂದ ಹಿಂತಿರುಗಲು ಟೋಕನ್‌ಗಳ ಬದಲಿಗೆ ಪೇಪರ್ ಟಿಕೆಟ್, ಕಾರ್ಡ್ ಮತ್ತು ಕ್ಯೂಆರ್ ಟಿಕೆಟ್ ಮೂಲಕ ಮಾತ್ರ ಪ್ರಯಾಣಿಸಬಹುದಾಗಿದೆ.

13-08-2024
Vijayavani
Pg 05

# ಹಣ್ಣುಗಳ ಉತ್ಪಾದನೆ ಹೆಚ್ಚಿಸಲು ಕ್ಲೀನ್ ಪ್ಲಾಂಟ್ ಪ್ರೋಗ್ರಾಂ

**ಭಾರತದಲ್ಲಿ ತೋಟಗಾರಿಕೆ ಬೆಳೆಗಳ ಇಳುವರಿ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿರುವ ಕ್ಲೀನ್ ಪ್ಲಾಂಟ್ ಪ್ರೋಗ್ರಾಂಗೆ (ಸಿಪಿಪಿ) ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. 2023ರ ಫೆಬ್ರವರಿಯಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಮ್ಮ ಮಧ್ಯಂತರ ಬಜೆಟ್ ಭಾಷಣದಲ್ಲಿ ಸಿಪಿಪಿಯನ್ನು ಮೊದಲು ಘೋಷಿಸಿದ್ದರು. ದೇಶಾದ್ಯಂತ ಹಣ್ಣಿನ ಬೆಳೆಗಳ ಗುಣಮಟ್ಟ ಹೆಚ್ಚಿಸುವ ಗುರಿಯನ್ನು ಯೋಜನೆ ಹೊಂದಿದೆ.**

## ಸಿಪಿಪಿ ಹೇಗೆ ಕಾರ್ಯನಿರ್ವಹಿಸುತ್ತದೆ?


ಬೆಳೆ ಇಳುವರಿಯನ್ನು ಹೆಚ್ಚಿಸಲು ಮತ್ತು ಆದಾಯದ ಅವಕಾಶಗಳನ್ನು ಸುಧಾರಿಸಲು ರೈತರಿಗೆ ವೈರಸ್ ಮುಕ್ತ, ಉತ್ತಮ ಗುಣಮಟ್ಟದ ಬಿತ್ತನೆ ಬೀಜಗಳನ್ನು ಅಥವಾ ಸಸಿಗಳ ನ್ನು ಪಡೆಯಲು ಸಹಾಯ ಮಾಡುವ ನಿಟ್ಟಿನಲ್ಲಿ ಈ ಕಾರ್ಯಕ್ರಮಕ್ಕೆ 3 ಪ್ರಮುಖ ಉದ್ದೇಶಗಳಿವೆ:

1. ರೋಗನಿರ್ಣಯ ಮತ್ತು ಚಿಕಿತ್ಸೆ ಒದಗಿಸಲು ಒಂಬತ್ತು ಸ್ವಚ್ಛ ಸಸ್ಯ ಕೇಂದ್ರಗಳ (ಸಿಪಿಸಿ) ಅಭಿವೃದ್ಧಿ ಮತ್ತು ನರ್ಸರಿಗಳಿಗೆ ಕಳುಹಿಸಲು ಮೂಲ ಸಸಿಗಳನ್ನು ಬೆಳೆಸುವುದು ಮತ್ತು ವಾಣಿಜ್ಯ ಉದ್ದೇಶ ಮತ್ತು ವಿತರಣೆಗಾಗಿ ಇರುವ ಎಲ್ಲಾ ದೇಶೀಯ ಮತ್ತು ಆಮದು ಮಾಡಿದ ಗಿಡಗಳನ್ನು ನಿರ್ಬಂಧಿಸುವುದು
2. ಸ್ವಚ್ಛ ಮೂಲ ಗಿಡಗಳನ್ನು ಬೆಳೆಸಲು ದೊಡ್ಡ ಪ್ರಮಾಣದ ನರ್ಸರಿಗಳ ಅಭಿವೃದ್ಧಿ ಸೇರಿದಂತೆ ಮೂಲಸೌಕರ್ಯಗಳ ವರ್ಧನೆ-ಸಿಪಿಸಿಗಳಿಂದ ಪಡೆದ ಮೂಲ ಸಸಿಗಳನ್ನು ನರ್ಸರಿಗಳಲ್ಲಿ ಅಭಿವೃದ್ಧಿಪಡಿಸಿ ರೈತರಿಗೆ ವಿತರಿಸುವುದು
3. ಗಿಡಗಳ ಉತ್ಪಾದನೆ ಮತ್ತು ಮಾರಾಟದಲ್ಲಿ ಸಂಪೂರ್ಣ ಹೊಣೆಗಾರಿಕೆ ಮತ್ತು ಅವುಗಳನ್ನು ನೋಡಿಕೊಳ್ಳಲು ಖಚಿತ ನಿಯಂತ್ರಕ ಮತ್ತು ಪ್ರಮಾಣೀಕರಣ ಪ್ರಕ್ರಿಯೆಯನ್ನು ರೂಪಿಸುವುದು

## ಸಸಿಗಳ ಆಮದು ಪ್ರಕ್ರಿಯೆ ಜಟಿಲ



ಈಗ, ಸಸಿಗಳನ್ನು ಆಮದು ಮಾಡಿಕೊಳ್ಳುವ ಪ್ರಕ್ರಿಯೆ ತುಂಬಾ ಜಟಿಲವಾಗಿದ್ದು, ಆಮದು ಮಾಡಿಕೊಂಡ ಗಿಡಗಳನ್ನು ಎರಡು ವರ್ಷಗಳ ಕಾಲ ಸಂಪರ್ಕಕ್ಕೆ ಬರದಂತೆ ನೋಡಿಕೊಳ್ಳಬೇಕಾಗುತ್ತದೆ. ಸಿಪಿಸಿಗಳು ಈ ಅವಧಿಯನ್ನು ಆರು ತಿಂಗಳುಗಳಿಗೆ ಇಳಿಸುತ್ತವೆ, ಇದರಿಂದಾಗಿ ರೈತರಿಗೆ ಭಾರತದಲ್ಲಿ ತೋಟಗಾರಿಕೆ ಬೆಳೆಗಳಿಗೆ ರೋಗ ಮುಕ್ತ ಮತ್ತು ಗುಣಮಟ್ಟದ ಸಸಿಗಳನ್ನು ಪಡೆಯುವುದು ಸುಲಭವಾಗುತ್ತದೆ.



**2023ರ ಮಧ್ಯಂತರ ಬಜೆಟ್ ಭಾಷಣದಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮೊದಲ ಬಾರಿ ಸಿಪಿಪಿ ಘೋಷಣೆ**

**24** ಮಿಲಿಯನ್ ಹೆಕ್ಟೇರ್ 2013-14ರಲ್ಲಿ ತೋಟಗಾರಿಕೆ ಬೆಳೆಗಳ ಪ್ರದೇಶ

- ಯೋಜನೆಗಾಗಿ 1,765 ಕೋಟಿ ರೂ. ಅನುದಾನಕ್ಕೆ ಕೃಷಿ ಸಚಿವಾಲಯ ಕೋರಿಕೆ
- ಭಾರತ ವಿಶ್ವದ ಎರಡನೇ ಅತಿದೊಡ್ಡ ಹಣ್ಣು ಮತ್ತು ತರಕಾರಿ ಉತ್ಪಾದಿಸುವ ದೇಶ
- ಭಾರತ ತಾಜಾ ಹಣ್ಣುಗಳ ಪ್ರಮುಖ ಆಮದುದಾರ ಮತ್ತು ರಫ್ತುದಾರ ದೇಶ

**277.4** ಮಿಲಿಯನ್ ಮೆಟ್ರಿಕ್ ಟನ್ ಈ ಹಿಂದೆ ಹಣ್ಣುಗಳ ಉತ್ಪಾದನೆ

**352** ಮಿಲಿಯನ್ ಮೆಟ್ರಿಕ್ ಟನ್‌ಗೆ ಹಣ್ಣುಗಳ ಉತ್ಪಾದನೆ ಏರಿಕೆ



**28.63** ಮಿಲಿಯನ್ ಹೆಕ್ಟೇರ್ 2023-24 ರವರೆಗೆ ತೋಟಗಾರಿಕೆ ಬೆಳೆಗಳ ಪ್ರದೇಶ

## ಸಿಪಿಪಿಯ ಅಗತ್ಯವೇನು?

ಚೀನಾದ ನಂತರ ಭಾರತವು ವಿಶ್ವದ ಎರಡನೇ ಅತಿದೊಡ್ಡ ಹಣ್ಣು ಮತ್ತು ತರಕಾರಿ ಉತ್ಪಾದಿಸುವ ದೇಶ. 2013-14 ರಿಂದ 2023-24 ರವರೆಗೆ, ತೋಟಗಾರಿಕೆ ಬೆಳೆಗಳ ಪ್ರದೇಶವು 24 ಮಿಲಿಯನ್ ಹೆಕ್ಟೇರ್‌ನಿಂದ 28.63 ಮಿಲಿಯನ್ ಹೆಕ್ಟೇರ್‌ಗೆ ಏರಿದೆ. ಉತ್ಪಾದನೆ 277.4 ಮಿಲಿಯನ್ ಮೆಟ್ರಿಕ್ ಟನ್ (ಎಂಟಿ) ನಿಂದ 352 ಮಿಲಿಯನ್ ಮೆಟ್ರಿಕ್ ಟನ್‌ಗೆ ಏರಿದೆ.

## ಕೃಷಿ ಸಚಿವಾಲಯ ಮನವಿ

ಯೋಜನೆಗಾಗಿ ಕೃಷಿ ಸಚಿವಾಲಯ 1,765 ಕೋಟಿ ರೂ. ಅನುದಾನ ಕೋರಿದೆ. ಇದರಲ್ಲಿ ಅರ್ಧದಷ್ಟು ಭಾಗ ವನ್ನು ಮಿಷನ್ ಫಾರ್ ಇಂಟಿಗ್ರೇಟೆಡ್ ಡೆವಲಪ್ಮೆಂಟ್ ಆಫ್ ಹಾರ್ಟಿಕಲ್ಚರ್‌ನ (ಎಂಐಡಿಎಚ್) ಬಜೆಟ್‌ನಿಂದ ಪಡೆದು, ಉಳಿದ ಅರ್ಧವು ಏಷ್ಯನ್ ಡೆವಲಪ್ಮೆಂಟ್ ಬ್ಯಾಂಕಿ (ಎಡಿಬಿ)ನಿಂದ ಸಾಲದ ರೂಪದಲ್ಲಿ ಪಡೆಯಲಾಗುತ್ತದೆ.

## ಭಾರತದ ಹಣ್ಣುಗಳಿಗೆ ಬೇಡಿಕೆ



ಭಾರತ ತಾಜಾ ಹಣ್ಣುಗಳ ಪ್ರಮುಖ ಆಮದುದಾರ ಮತ್ತು ರಫ್ತುದಾರ ದೇಶವಾಗಿದೆ. 2023-24 ರ ಆರ್ಥಿಕ ವರ್ಷದಲ್ಲಿ ಭಾರತವು 1.15 ಬಿಲಿಯನ್ ಡಾಲರ್ ಮೌಲ್ಯದ ತಾಜಾ ಹಣ್ಣುಗಳನ್ನು ರಫ್ತು ಮಾಡಿದ್ದರೆ, 2.73 ಬಿಲಿಯನ್ ಡಾಲರ್ ಮೌಲ್ಯದ ಹಣ್ಣುಗಳನ್ನು ಆಮದು ಮಾಡಿಕೊಂಡಿದೆ. ದೇಶದಲ್ಲಿ ಹೆಚ್ಚುತ್ತಿರುವ ಹಣ್ಣುಗಳ ಬಳಕೆಯೊಂದಿಗೆ, ನಿರ್ದಿಷ್ಟವಾಗಿ ವಿದೇಶಿ ಸೇಬುಗಳ ಜೊತೆಗೆ, ಆವಕಾಡೊ ಮತ್ತು ಬ್ಲೂಬೆರ್ರಿಯಂತಹ ಎಕ್ಸೋಟಿಕ್ಸ್ ಗಳಿಗೆ ಬೇಡಿಕೆ ಹೆಚ್ಚಾಗಿದೆ. 2018-20 ರ ನಡುವೆ, ಹಣ್ಣಿನ ಸಸಿಗಳನ್ನು ಆಮದು ಮಾಡಿಕೊಳ್ಳುವ ಎಕ್ಸಿಮ್ ಸಮಿತಿ, 2018 ರಲ್ಲಿ 21.44 ಲಕ್ಷ ಸೇಬು ಸಸ್ಯಗಳನ್ನು ಆಮದು ಮಾಡಿಕೊಳ್ಳಲು ಅನುಮತಿ ನೀಡಿತ್ತು, ಇದು 2020 ರಲ್ಲಿ 49.57 ಲಕ್ಷಕ್ಕೆ ಏರಿತು. 2018 ರಲ್ಲಿ, ಕೇವಲ 1,000 ಆವಕಾಡೊ ಸಸ್ಯಗಳನ್ನು ಆಮದು ಮಾಡಿಕೊಳ್ಳಲು ಅನುಮತಿ ನೀಡಲಾಗಿದ್ದು, ಅದು 2020 ರಲ್ಲಿ 26,500 ಕ್ಕೆ ಏರಿತು. ಅಂತೆಯೇ, ಬ್ಲೂಬೆರಿ ಸಸ್ಯಗಳ ಆಮದಿಗೆ ಅನುಮತಿಗಳು 2018 ರಲ್ಲಿ 1.55 ಲಕ್ಷದಿಂದ 2020 ರಲ್ಲಿ 4.35 ಲಕ್ಷಕ್ಕೆ ಏರಿದೆ.

**13-08-2024
Hosadiganta Pg 07**

### ರೈತ ಸಮೃದ್ಧಿ ಯೋಜನೆ ಜಾರಿಗೊಳಿಸಲು ರಾಜ್ಯ ಸರ್ಕಾರ ಸಿದ್ಧತೆ

# ಕೃಷಿಗಿನ್ನು ಕೈಗಾರಿಕಾ ಮಾನ್ಯತೆ

■ ರುದ್ರಣ್ಣ ಹರ್ತಿಕೋಟೆ ಬೆಂಗಳೂರು

ಹೆಚ್ಚುತ್ತಿರುವ ರೈತರ ಆತ್ಮಹತ್ಯೆ ತಡೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಜತೆಯಲ್ಲೇ ಕೃಷಿಗೆ ಕೈಗಾರಿಕೆ ಮಾನ್ಯತೆ ನೀಡಿ, ಅನ್ನದಾತರ ಆದಾಯ ವೃದ್ಧಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ರೈತ ಸಮೃದ್ಧಿ ಯೋಜನೆ ಜಾರಿಗೆ ಮುಂದಾಗಿದೆ.

ಸಿಎಂ ಸಿದ್ದರಾಮಯ್ಯ ಬಜೆಟ್‌ನಲ್ಲಿ ಪ್ರಕಟಿಸಿದ ನಂತರ ಯೋಜನೆ ಜಾರಿಗೆ ಸಂಬಂಧಿಸಿದಂತೆ ಮಣಿಪುರದ ಕೇಂದ್ರ ಕೃಷಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಎಸ್. ಅಯ್ಯಪ್ಪನ್ ಅಧ್ಯಕ್ಷತೆಯ ಉನ್ನತ ಸಮಿತಿ ಯೋಜನೆ ರೂಪುರೇಷೆ ಸಿದ್ಧಪಡಿಸಿದೆ. ಆ ಯೋಜನೆ ಜಾರಿಗೆ ತರಲು ಕೃಷಿ ಇಲಾಖೆ ಅಧ್ಯಯನ ನಡೆಸಿದೆ.

ಕೃಷಿಗೆ ಉದ್ಯಮದ ಮಾನ್ಯತೆ ಸಿಗುವಂತೆ ಮಾಡುವುದಕ್ಕೆ ಅಗತ್ಯವಾದ ಪೂರ್ವಸಿದ್ಧತೆ ಕೈಗೊಳ್ಳುವುದು ರೈತ ಸಮೃದ್ಧಿ ಯೋಜನೆಯ ಒಟ್ಟಾರೆ ಆಶಯ. ಕೇವಲ ಬೆಳೆ ಬೆಳೆಯುವುದಕ್ಕಷ್ಟೇ ಸೀಮಿತ ವಾಗದೆ ಸಮಗ್ರ ಕೃಷಿ ಪದ್ಧತಿ ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ. ಕೃಷಿ ಹಾಗೂ ಕೃಷಿ ಸಂಬಂಧಿತ ಇಲಾಖೆಗಳ ಯೋಜನೆಗಳನ್ನು ಕ್ರೋಡೀಕರಿಸಿ ರಾಜ್ಯದಲ್ಲಿ ಪ್ರಗತಿಪರ ಕೃಷಿಕರನ್ನು ಹುಟ್ಟು ಹಾಕುವ ಆಶಯ ಹೊಂದಲಾಗಿದೆ. ಆಗಷ್ಟೇ ಉಳಿದ ರೈತರನ್ನು ವಿವಿಧ ವಿಚಾರದಲ್ಲಿ ಎಚ್ಚರಿಸಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಅಪ್ಪ ಹಾಕಿದ ಆಲದ ಮರಕ್ಕೆ ನೇಣು ಹಾಕಿಕೊಂಡ ಎಂಬ ಗಾದೆ ಮಾತಿಗೆ ಅನ್ವಯವಾಗುವ ರೀತಿ ರೈತರ ಬದುಕು ಸಂಕಷ್ಟಕ್ಕೆ ಸಿಲುಕಲಿದೆ.

**ಒಂದೆಡೆ ಮಾಹಿತಿ**

**ಕೃಷಿಗೆ ಸಂಬಂಧಿಸಿದ ಎಲ್ಲ ಮಾಹಿತಿಯೂ ಒಂದೆಡೆ ಸಿಗುವಂತೆ ನೋಡಿಕೊಳ್ಳಲು ಸಹ ವ್ಯವಸ್ಥೆ ಮಾಡಲಾಗುತ್ತಿದೆ. ಇದರಿಂದ ರೈತರ ಪರ ಯೋಜನೆಗಳಿಗೆ ಸಾಕಷ್ಟು ಅನುಕೂಲವಾಗುತ್ತದೆ.**

**ಕೃಷಿ ಕ್ಯಾಬಿನೆಟ್:** ರೈತ ಸಮೃದ್ಧಿ ಯೋಜನೆಯನ್ನು ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಜಾರಿಗೆ ತರಲು ಪ್ರತ್ಯೇಕ ಕೃಷಿ ಕ್ಯಾಬಿನೆಟ್‌ನ ಅಗತ್ಯವನ್ನು ಸಿದ್ದರಾಮಯ್ಯ ಸರ್ಕಾರ ಮನಗಂಡಿದೆ. ಅದಕ್ಕಾಗಿಯೇ ಸಿಎಂ ಅಧ್ಯಕ್ಷತೆಯಲ್ಲಿ ಕೃಷಿ ಅಭಿವೃದ್ಧಿ ಪ್ರಾಧಿಕಾರ ರಚನೆಯ ಬಗ್ಗೆ ಬಜೆಟ್‌ನಲ್ಲಿ ಪ್ರಸ್ತಾಪಿಸಿರುವಂತೆ ಅನುಷ್ಠಾನಕ್ಕೆ ತರಲು ಸಿದ್ಧತೆ ನಡೆದಿವೆ. ಕೃಷಿ ಮತ್ತು ಪೂರಕ ಚಟುವಟಿಕೆಗಳಿಗೆ ಸಂಬಂಧಿಸಿದ ಕೃಷಿ, ಪಶು ಸಂಗೋಪನೆ, ತೋಟಗಾರಿಕೆ, ರೇಷ್ಮೆ, ಮೀನುಗಾರಿಕೆ, ಸಹಕಾರ ಇಲಾಖೆಗಳ ನಡುವೆ ಸಮನ್ವಯತೆ ತರುವುದು ಉದ್ದೇಶ. ಈ ಸಚಿವರು ಆಗಾಗ ಸರಣಿ ಸಭೆ ನಡೆಸಿ ಯೋಜನೆಗಳನ್ನು ರೂಪಿಸಲಿದ್ದಾರೆ.



**ವಿ ವಿ|ಶೇ|ಷ**

### ಏನೆಲ್ಲ ಶಿಫಾರಸು?

- ಎಂಎಸ್ಎಂ ವಲಯದಲ್ಲಿ ಕೃಷಿ ಲಿಂಕ್
- ಕೃಷಿ ಉತ್ಪಾದಕ ಸಂಸ್ಥೆ, ಸ್ಟಾರ್ಟಪ್ ಬಳಕೆ
- ರೈತರ ಸಾಮರ್ಥ್ಯ ಹೆಚ್ಚಿಸುವ ಅಗತ್ಯತೆ
- ಇದಕ್ಕಾಗಿ ಸ್ವಸಹಾಯ ಸಂಘಗಳ ಬಳಕೆ
- ಮಣ್ಣು ಪರೀಕ್ಷೆ, ಮಣ್ಣಿಗೆ ತಕ್ಕ ಬೆಳೆ ಸೂತ್ರ
- ಬೆಳೆಗೆ ತಕ್ಕಂತೆ ಬ್ರಾಂಡಿಂಗ್ ಮಾಡುವುದು
- ಮಾರುಕಟ್ಟೆ ವ್ಯವಸ್ಥೆ ಮುಕ್ತಗೊಳಿಸುವುದು
- ಕಂಪನಿಗಳಿಗೆ ವಿಶೇಷ ರಿಯಾಯ್ತಿ ನೀಡಿಕೆ
- ಸಂಸ್ಕರಣೆಗೆ ಕ್ಲಸ್ಟರ್‌ಗಳ ರಚನೆ ಆಗಬೇಕು

### ಯಾವುದಕ್ಕೆಷ್ಟು ವೆಚ್ಚ?

(ಡಾ. ಅಯ್ಯಪ್ಪನ್ ಸಮಿತಿ ಪ್ರಕಾರ)

- ಪ್ರಸಕ್ತ ಬಜೆಟ್‌ನಲ್ಲಿ 10 ಕೋಟಿ ರೂ.ಸಿಕ್ಕಿದೆ
- ಸಮಗ್ರ ಕೃಷಿ ಪದ್ಧತಿ ಅಳವಡಿಕೆಗೆ ₹6 ಕೋಟಿ
- ಕೃಷಿ ಉತ್ಪಾದಕ ಸಂಸ್ಥೆಗಳು, ಸ್ವ ಸಹಾಯ ಸಂಘಗಳ ಮೂಲಕ ತರಬೇತಿಗೆ 1 ಕೋಟಿ ರೂ.
- ಬ್ರ್ಯಾಂಡಿಂಗ್, ರಫ್ತು, ಮಾರುಕಟ್ಟೆಗೆ ₹2 ಕೋಟಿ
- ಮಣ್ಣು ಪರೀಕ್ಷೆಗೆ 1 ಕೋಟಿ ರೂಪಾಯಿ



ಸಮಗ್ರ ಕೃಷಿಗೆ ಪೂರಕವಾಗುವ ಯೋಜನೆ ರೂಪಿಸಿ ಅನುಷ್ಠಾನಕ್ಕೆ ರೈತರಿಂದ ಬೇಡಿಕೆ ಇತ್ತು. ಸಿಎಂ ಬಜೆಟ್‌ನಲ್ಲಿ ಕೃಷಿ ಸಮೃದ್ಧಿ ಘೋಷಣೆ ಮಾಡಿದ್ದರು. ಯೋಜನೆ ಜಾರಿಗಾಗಿ ಎಸ್. ಅಯ್ಯಪ್ಪನ್ ಸಮಿತಿ ವರದಿ ನೀಡಿದೆ. ಸಮಿತಿಯ ವರದಿ ಜಾರಿಗೆ ತಂದರೆ ರೈತರ ಆತ್ಮಹತ್ಯೆ ತಡೆಯಲು ಸಾಧ್ಯವಾಗುತ್ತದೆ. ಆದಷ್ಟು ಶೀಘ್ರ ರೈತ ಸಮೃದ್ಧಿ ಯೋಜನೆ ಜಾರಿಗೆ ಬರಲಿದೆ. ಕೃಷಿ ಕ್ಯಾಬಿನೆಟ್ ಸಹ ಬೇಗ ಆಗಲಿದೆ.

| ಎನ್. ಚಲುವರಾಯಸ್ವಾಮಿ ಕೃಷಿ ಸಚಿವ

**ಮೊದಲ ಆದ್ಯತೆ?**

ರಾಜ್ಯದ 398 ಗ್ರಾ.ಪಂಗಳಲ್ಲಿ ಕೃಷಿ ಉತ್ಪಾದಕತೆ ಕಡಿಮೆ ಇದೆ. ಅಂತಹ ಕಡೆ ರೈತ ಸಮೃದ್ಧಿ ಯೋಜನೆಯನ್ನು ಮೊದಲ ಆದ್ಯತೆಯಲ್ಲಿ ಜಾರಿಗೆ ತರುವ ಬಗ್ಗೆ ಇಲಾಖೆಯಲ್ಲಿ ಚರ್ಚೆ ನಡೆದಿದೆ.

### ವರದಿಯಲ್ಲಿನ ಪ್ರಮುಖಾಂಶ

ಸ್ಥಳೀಯ ಮಾರುಕಟ್ಟೆ, ರಫ್ತು ಎರಡಕ್ಕೂ ಆದ್ಯತೆ ನೀಡಲಾಗುತ್ತದೆ. ಯಾವ ಪ್ರದೇಶದಲ್ಲಿ ಯಾವ ಬೆಳೆ ಬೆಳೆಯುತ್ತಾರೋ ಅಲ್ಲಿ ಅದರದೇ ಆದ ಕ್ಲಸ್ಟರ್ ನಿರ್ಮಾಣ ಮಾಡಲಾಗುತ್ತದೆ. ಮಂಡ್ಯದಲ್ಲಿ ರಾಗಿ, ಭತ್ತ, ವಿಜಯಪುರದಲ್ಲಿ ದ್ರಾಕ್ಷಿ, ಚಿತ್ರದುರ್ಗದಲ್ಲಿ ಶೇಂಗಾ, ಕೊಪ್ಪಳದಲ್ಲಿ ಹಣ್ಣು ಹೀಗೆ ಯೋಜನೆ ರೂಪಿಸಲಾಗುತ್ತಿದೆ. ರೈತರಿಗೆ ತಂತ್ರಜ್ಞಾನದ ಬಗ್ಗೆ ಅರಿವು ಮೂಡಿಸಲಾಗುತ್ತದೆ. ಕೊಯ್ಲೋತ್ತರ ತಂತ್ರಜ್ಞಾನದ ಮೂಲಕ ನಷ್ಟ ಕಡಿಮೆ ಮಾಡುವುದು, ಯಂತ್ರೋಪಕರಣಗಳ ಬಳಕೆ ಹೆಚ್ಚಿಸುವುದು, ಪ್ರಾಥಮಿಕ ಹಂತದ ಸಂಸ್ಕರಣೆಯನ್ನು ರೈತರೇ ಮಾಡುವಂತೆ ಮಾಡುವುದು, ಕೃಷಿ ಸಂಸ್ಕರಣಾ ಆಯುಕ್ತಾಲಯದ ಮೂಲಕ ಡೈರಿ, ಮೀನುಗಾರಿಕೆ ಹೀಗೆ ವಿವಿಧ ಕೃಷಿ ಹಾಗೂ ಕೃಷಿಗೆ ಪೂರಕ ಉತ್ಪನ್ನಗಳ ಸಂಸ್ಕರಣೆ ರೈತರ ಮನೆಯಂಗಲದಲ್ಲಿಯೇ ಆಗುವಂತೆ ನೋಡಿಕೊಳ್ಳುವ ಗುರಿಯೂ ಇದರಲ್ಲಿದೆ. ರೈತರ ಉತ್ಪನ್ನಗಳಿಗೆ ಡಿಜಿಟಲ್ ಪ್ಲಾಟ್‌ಫಾರಂಗಳನ್ನು ಒದಗಿಸುವುದು, ಅದಕ್ಕೆ ತಕ್ಕಂತೆ ಉತ್ಪನ್ನ ಸಿದ್ಧಪಡಿಸುವ ಬಗ್ಗೆ ಶಿಫಾರಸುಗಳನ್ನು ನೀಡಲಾಗಿದೆ. ಅವುಗಳ ಜಾರಿಗೆ ಇಲಾಖೆ ಚರ್ಚೆ ನಡೆಸಿದೆ.

### ಯೋಜನೆಯ ಉದ್ದೇಶವೇನು?

■ ಸುಸ್ಥಿರ, ಲಾಭದಾಯಕ ಗುರಿ ■ ಸಮಗ್ರ ಕೃಷಿಗೆ ಉತ್ತೇಜನ ■ ಕೃಷಿ ಆದಾಯ ಸುಸ್ಥಿರತೆಗೆ ಬೆಂಬಲ ■ ಮಣ್ಣಿನ ಗುಣ, ಮಾರುಕಟ್ಟೆ ಬೇಡಿಕೆ ಆಧರಿಸಿ ಬೆಳೆ ನಿರ್ಧಾರ ಮಾಡುವುದು ■ ಮಣ್ಣು ಪರೀಕ್ಷೆ ಗುಣಮಟ್ಟದ ಜಾಗೃತಿ ■ ಹೊಸ ಕೃಷಿ ಪದ್ಧತಿ, ತಂತ್ರಜ್ಞಾನದ ಅರಿವು ■ ಕೃಷಿ ಉತ್ಪನ್ನಗಳ ಸಂಗ್ರಹಣೆ ಹಾಗೂ ಮೌಲ್ಯವರ್ಧನೆಯ ಬಗ್ಗೆ ಮಾಹಿತಿ ■ ಉತ್ತಮ ಬೆಳೆ, ಮಾರುಕಟ್ಟೆ ಸಂಪರ್ಕ.

**13-08-2024
Vijayavani Pg 01**

For more information visit
University Library Website
Web - uasbagrilibindia.org
E-mail- librarian@uasbangalore.edu.in

# ಈ ಆಸ್ಪತ್ರೆಯಲ್ಲಿ ಕ್ಯಾನ್ಸರ್‌ಗೆ ಗೋಉತ್ಪನ್ನಗಳೇ ಔಷಧಿ

ಕ್ಯಾನ್ಸರ್ ಎಂಬುದು ವಿಶ್ವದಲ್ಲೇ ಅತ್ಯಂತ ವೇಗವಾಗಿ ಹಬ್ಬುತ್ತಿರುವ ಮಾರಕ ಕಾಯಿಲೆಗಳಲ್ಲಿ ಒಂದಾಗಿದ್ದು, 21ನೇ ಶತಮಾನದ ಅಂತ್ಯಕ್ಕೆ ಎದುರಾಗಿರುವ ಮಾರಣಾಂತಿಕ ಸವಾಲುಗಳಲ್ಲಿ ಇದು ಸಹ ಒಂದಾಗಿದೆ. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ವಿಶ್ವದ ಅತ್ಯಂತ ಕೊಲೆಗಾರನಾಗಿ ಈ ಕಾಯಿಲೆ ಇಂದು ಮಾರ್ಪಟ್ಟಿದೆ. ಈ ರೋಗದ ವಿರುದ್ಧ ಹೋರಾಡಲು ಇಡೀ ವಿಶ್ವದ ವಿಜ್ಞಾನಿಗಳು ಶತಪ್ರಯತ್ನ ಪಡುತ್ತಿದ್ದಾರೆ. ಆದಾಗ್ಯೂ ಖಚಿತವಾದ ಶೇಕಡಾ ನೂರರಷ್ಟು ಫಲಿತಾಂಶ ನೀಡುವ ಚಿಕಿತ್ಸೆಗಾಗಿ ಇಂದು ವಿಶ್ವವೇ ಕಾಯುತ್ತಿದೆ. ಪರಿಸ್ಥಿತಿ ಹೀಗಿರುವಾಗ ವಿಜ್ಞಾನಿಗಳು ಕ್ಯಾನ್ಸರ್ ನಿರ್ವಹಣೆಗೆ ಪೂರಕ ಮತ್ತು ಪರ್ಯಾಯ ಔಷಧದ ಸಂಶೋಧನೆಗೆ ಉತ್ಸುಕರಾಗಿದ್ದು, ಆಯುರ್ವೇದದಲ್ಲಿ ಸಸ್ಯೌಷಧಿಗಳನ್ನು ಬಳಸಿಕೊಂಡು ವಿವಿಧ ಗೆಡ್ಡೆಗಳನ್ನು ತಡೆಗಟ್ಟುವ ಅಥವಾ ನಿಗ್ರಹಿಸುವ ವಿಧಾನಕ್ಕೆ ಆದ್ಯತೆಯನ್ನು ನೀಡಿದ್ದಾರೆ. ಹೀಗಾಗಿ ಇಂದಿನ ದಿನಗಳಲ್ಲಿ ಕ್ಯಾನ್ಸರ್ ವಿರೋಧಿ ಔಷಧಿಗಳ ಬಳಕೆಯನ್ನು ಮೌಲ್ಯೀಕರಿಸಲು ಸಾವಿರಾರು ಗಿಡಮೂಲಿಕೆಗಳು ಮತ್ತು ಸಾಂಪ್ರದಾಯಿಕ ಸಂಯುಕ್ತಗಳನ್ನು ವಿಶ್ವದಾದ್ಯಂತ ಪರೀಕ್ಷಿಸಲಾಗುತ್ತಿದೆ. ಆಯುರ್ವೇದದಲ್ಲಿ ಹೆಚ್ಚಿನ ಸಾಮರ್ಥ್ಯವನ್ನು ಹೊಂದಿರುವ ಗಿಡಮೂಲಿಕೆಗಳ ಕಷಾಯಗಳನ್ನು ಬಹಳ ಹಿಂದಿನಿಂದಲೂ ಕ್ಯಾನ್ಸರ್ ಗುಣಪಡಿಸಲು ತಯಾರಿಸಲಾಗುತ್ತಿರುವುದನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

ಆಯುರ್ವೇದ ವೈದ್ಯಕೀಯ ವ್ಯವಸ್ಥೆಯು ವಿಶ್ವದ ಅತ್ಯಂತ ಹಳೆಯ ವೈದ್ಯಕೀಯ ವ್ಯವಸ್ಥೆಯಾಗಿದ್ದು, ಕನಿಷ್ಠ ಮೂರು ಸಾವಿರ ವರ್ಷದಷ್ಟು ವೈಜ್ಞಾನಿಕ ಇತಿಹಾಸವನ್ನು ಹೊಂದಿದೆ. ಇದು ಕ್ಯಾನ್ಸರ್ ಚಿಕಿತ್ಸೆಗೆ ಒಂದು ಸಂಭವನೀಯ ಪರಿಹಾರವಾಗಿದ್ದು, ಕಾಯಿಲೆಯನ್ನು ಅದರ ಮೂಲದಲ್ಲೇ ಗುಣಪಡಿಸುವಂತಹ ಅದ್ಭುತ ಕೆಲಸವನ್ನು ಮಾಡುತ್ತದೆ. ಇದರಲ್ಲಿ ಕ್ಯಾನ್ಸರ್‌ನ್ನು ಉರಿಯೂತದ ಅಥವಾ ಉರಿಯೂತವಲ್ಲದ ಊತ ಎಂದು ವಿವರಿಸಲಾಗಿದ್ದು, ಅದನ್ನು ಗ್ರಂಥಿ ಅಥವಾ ಅರ್ಬುದಾ ಎಂಬುದಾಗಿ ಉಲ್ಲೇಖಿಸಲಾಗಿದೆ. ಇದರಲ್ಲಿ ಉಲ್ಬಣಗೊಂಡಿರುವ ಮತ್ತು ದೋಷಪೂರಿತವಾದ ಅಂಗಾಂಶವನ್ನು ಆಧರಿಸಿ ಆರು ವಿವಿಧ ಗೆಡ್ಡೆಗಳನ್ನು ವಿವರಿಸಲಾಗಿದೆ. ವಾತಾ, ಪಿತ್ತ, ಕಫ, ಮೇದೋಜ್, ಮಾಂಸಾರ್ಬುದ ಮತ್ತು ರಕ್ತಾರ್ಬುದಾ ಎಂಬುದಾಗಿ ವರ್ಗೀಕರಿಸಲಾಗಿದೆ. ಇದರಲ್ಲಿ ಮಾಂಸಾರ್ಬುದ ಮತ್ತು ರಕ್ತಾರ್ಬುದಾವನ್ನು ಗುಣಪಡಿಸಲಾಗದು ಎಂಬುದಾಗಿ ವಿವರಿಸಲಾಗಿದೆ.

ಕ್ಯಾನ್ಸರ್‌ಗೆ ಪರ್ಯಾಯ ಚಿಕಿತ್ಸೆಯನ್ನು ಇಡೀ ವಿಶ್ವವೇ ಹುಡುಕುತ್ತಿರು ವಾಗ ಗುಜರಾತ್‌ನಲ್ಲಿರುವ ವಾಘಲ್ಧಾರ ಕ್ಯಾನ್ಸರ್ ಆಸ್ಪತ್ರೆಯು ಕ್ಯಾನ್ಸರ್ ಪೀಡಿತರಿಗೆ ಗೋಚಿಕಿತ್ಸೆಯ ಮೂಲಕ ಪರಿಹಾರವನ್ನು ಒದಗಿಸುವಲ್ಲಿ ಯಶಸ್ವಿಯಾಗಿದೆ. ಅದರಲ್ಲೂ ಗೋವಿನ ಉತ್ಪನ್ನಗಳಾದ ಪಂಚಗವ್ಯ ಮತ್ತು ಗೋಮೂತ್ರದಿಂದ ಚಿಕಿತ್ಸೆಯನ್ನು ನೀಡುತ್ತಾ ರೋಗಿಗಳ ಬಾಳಲ್ಲಿ ಆಶಾಕಿರಣವನ್ನು ಮೂಡಿಸಿದೆ. ಸೂರತ್‌ನಿಂದ ಮುಂಬೈ ಕಡೆಯ ಹೆದ್ದಾರಿಯಲ್ಲಿ 4 ಕಿ.ಮೀ. ಕ್ರಮಿಸಿದರೆ ಸಿಗುವ ವಲ್ಸಾಡ ಗ್ರಾಮದಿಂದ 16 ಕಿ.ಮೀ. ಸೂರತ್ ಕಡೆಗೆ ಹೋದರೆ ವಾಘಲ್ಧಾರ ಎಂಬ ಊರು ಸಿಗುತ್ತದೆ. ಅಲ್ಲಿ ರಾಷ್ಟ್ರೀಯ ಹೆದ್ದಾರಿ 48ರ ಬಲಭಾಗದಲ್ಲಿ ಸುಮಾರು 24 ಎಕರೆ ಪ್ರದೇಶದಲ್ಲಿ ಶ್ರೀ ಪ್ರಭವ್ ಹೇಮ ಕಾಮಧೇನು ಗಿರಿವಿಹಾರ್ ಟ್ರಸ್ಟ್, ಪಾಲಿತಾಣ ಎಂಬ ಬೋರ್ಡ್ ಕಾಣುತ್ತದೆ.



## ಧರಣಿ ಮಂಡಲ

• ಕೆ.ಎನ್. ಶೈಲೇಶ್ ಹೊಳ್ಳ
shyleshholla@gmail.com

ಇದರೊಂದಿಗೆ ಶ್ರೀ ರಸಿಕಲಾಲ ಮಾಣಿಕ್‌ಚಂದ್ ಧಾರಿವಾಲ್ ಕ್ಯಾನ್ಸರ್ ಆಸ್ಪತ್ರೆಯ ಕಮಾನು ಕಾಣಿಸುತ್ತದೆ. ಒಳಗೆ ಹೋಗುತ್ತಿದ್ದಂತೆ ಕಾಣುವ ಹೂವಿನ ಗಿಡಗಳು, ಹಣ್ಣಿನ ಗಿಡಗಳನ್ನೊಳಗೊಂಡ ಅಚ್ಚ ಹಸಿರು ಇದನ್ನು ಆಸ್ಪತ್ರೆಯಂತೆ ಬಿಂಬಿಸದೇ ಯಾವುದೋ ಆಶ್ರಮದ ಅನುಭವವನ್ನು ನೀಡುತ್ತದೆ. ಎದುರಿಗೆ ಕಾಣುವ ಸುಂದರವಾದ ಜೈನ ದೇವಾಲಯ, ಭೋಜನ ಶಾಲೆ, ಜೈನ ಸಾಧು ಮತ್ತು ಸಾಧ್ವಿಗಳ ವಿಶ್ರಾಂತಿ ಗೃಹ ವಿಶಿಷ್ಟ ಅನುಭೂತಿಯನ್ನು ನೀಡುತ್ತದೆ. ಇದರೊಂದಿಗೆ ಈ ಸಂಕೀರ್ಣದಲ್ಲಿನ ಕಾಲೇಜು ಕಟ್ಟಡ, ಆಸ್ಪತ್ರೆ ಕಟ್ಟಡ, ವಿದ್ಯಾರ್ಥಿಗಳ ಹಾಸ್ಟೆಲ್, ಸ್ಟಾಫ್ ಕ್ವಾಟರ್ಸ್, ಔಷಧಿ ಸಸ್ಯಗಳ ಉದ್ಯಾನವನ ಕಣ್ತುಂಬುತ್ತದೆ. ಪ್ರಮುಖವಾಗಿ ಇದೇ ಆವರಣದಲ್ಲೊಂದು ಗೋಶಾಲೆ ಇದ್ದು ಅದರಲ್ಲಿ 400ಕ್ಕೂ ಹೆಚ್ಚು ಸ್ಥಳೀಯ ದೇಶಿ ಗೋವುಗಳನ್ನು ಪೋಷಿಸಲಾಗುತ್ತಿದೆ. ಈ ಗೋವುಗಳ ಉತ್ಪನ್ನಗಳಿಂದಲೇ ಇಲ್ಲಿಯ 150 ಹಾಸಿಗೆಯುಳ್ಳ ಕ್ಯಾನ್ಸರ್ ಆಸ್ಪತ್ರೆಗೆ ಅವಶ್ಯಕವಾದ ಕ್ಯಾನ್ಸರ್ ನಿವಾರಕ ಔಷಧಿಯನ್ನು ಪ್ರತಿನಿತ್ಯ ತಯಾರಿಸಲಾಗುತ್ತದೆ. ಹೆಚ್ಚಿನ ವೆಚ್ಚದ ಔಷಧವನ್ನು ಪಡೆಯಲು ಸಾಧ್ಯವಾಗದ ಮತ್ತು ಆರ್ಥಿಕವಾಗಿ ಹಿಂದುಳಿದವರ ಹಿತಾಸಕ್ತಿಗಾಗಿಯೇ ಈ ಆಸ್ಪತ್ರೆಯನ್ನು ಸ್ಥಾಪಿಸಲಾಗಿದೆ. ಆರೋಗ್ಯಕರ ಸಮಾಜ ಮತ್ತು ಆರೋಗ್ಯಕರ ರಾಷ್ಟ್ರವನ್ನು ಸ್ಥಾಪಿಸುವುದು ಈ ಸಂಸ್ಥೆಯ ಮುಖ್ಯ ಉದ್ದೇಶ ಮತ್ತು ಕನಸಾಗಿದೆ.

ಇಲ್ಲಿ ಬಂದಂತಹ ರೋಗಿಗಳಿಗೆ ಪಂಚಗವ್ಯ ಮತ್ತು ಪಂಚಕರ್ಮ ಚಿಕಿತ್ಸೆಯೊಂದಿಗೆ ಉಪಚರಿಸುವುದು ಚಿಕಿತ್ಸೆಯ ಒಂದು ಭಾಗವಾಗಿದೆ. ಸುಸಜ್ಜಿತ ವಸತಿ ಮತ್ತು ಪೌಷ್ಠಿಕಯುಕ್ತ ಆಹಾರವನ್ನು ರೋಗಿಗಳಿಗೆ ಒದಗಿಸುವ ಮೂಲಕ ಚಿಕಿತ್ಸೆಗೆ ಪೂರಕ ವಾತಾವರಣವನ್ನು ಸೃಷ್ಟಿಸಲಾಗಿದೆ. ಸುಸಜ್ಜಿತವಾದ ಫಿಸಿಯೋಥೆರಪಿ ಘಟಕದೊಂದಿಗೆ ಆಧುನಿಕ ತಂತ್ರಜ್ಞಾನವನ್ನು ಹೊಂದಿರುವ ಕ್ಷ-ಕಿರಣ ಘಟಕವು ಇಲ್ಲಿ ಕಾರ್ಯನಿರ್ವಹಿಸುತ್ತಿದೆ. ಹಾಗೆಯೇ ಇಲ್ಲಿಯ ಚಿಕಿತ್ಸಾ ಘಟಕವು ಒಳರೋಗಿಗಳಷ್ಟೇ ಅಲ್ಲದೆ ಹೊರ ರೋಗಿಗಳಿಗೂ ವೈದ್ಯಕೀಯ ಸೌಲಭ್ಯವನ್ನು ಒದಗಿಸುತ್ತಿದೆ. ವಿಶೇಷವಾಗಿ ಕ್ಯಾನ್ಸರ್ ರೋಗಿಗಳಿಗೆ ಸಂಪೂರ್ಣ ಉಚಿತ ಔಷಧ, ವಸತಿ ಮತ್ತು ಆಹಾರ ನೀಡುವುದರೊಂದಿಗೆ ಉಚಿತ ಸೇವೆಯನ್ನು ಸಲ್ಲಿಸುತ್ತಿದೆ.

ಹೊಸದಾಗಿ ಬಂದಂತಹ ರೋಗಿಗಳು ಬೆಳಿಗ್ಗೆ 9 ಗಂಟೆಗೆ ಕೇವಲ 50 ರೂಪಾಯಿ ನೀಡಿ ಪ್ರವೇಶವನ್ನು ಪಡೆಯಬೇಕಿದೆ. ಬೆಳಿಗ್ಗೆ 10:30ರಿಂದ 12:30 ರವರೆಗೆ ಮತ್ತು ಮಧ್ಯಾಹ್ನ 3:30ರಿಂದ 5:30 ರವರೆಗೆ ವೈದ್ಯರು ಪರೀಕ್ಷಿಸಿದ ನಂತರ 10 ದಿನಗಳವರೆಗೆ ಚಿಕಿತ್ಸೆಗೆ ತಂಗಲು ಇಲ್ಲಿ ಅವಕಾಶವನ್ನು ಕಲ್ಪಿಸುವುದರೊಂದಿಗೆ ಜೊತೆಗೆ ತಂಗಲು ಒಬ್ಬರಿಗೆ ಮಾತ್ರ ಪ್ರವೇಶವನ್ನು ಅನುಮತಿಸಲಾಗಿದೆ. ಇದರೊಂದಿಗೆ ರೋಗಿಗೆ 11 ದಿನಗಳವರೆಗೆ ಬೇಕಾದ ಉಪಾಹಾರ, ಊಟ ಮತ್ತು ರಾತ್ರಿಯ ಭೋಜನದ ಕೂಪನ್‌ಗಳನ್ನು ಕೊಡಲಾಗುತ್ತದೆ. ಒಂದು ಸಾವಿರ ರೂಪಾಯಿ ಮುಂಗಡ ಠೇವಣಿಯನ್ನು ಪಾವತಿಸಬೇಕಾಗಿದ್ದು, ಅದನ್ನು 11ನೇ ದಿನಕ್ಕೆ ಹಿಂದಿರುಗಿಸಲಾಗುತ್ತದೆ. ಸಂಬಂಧಿಕರು ಮತ್ತು ಮಿತ್ರರು ರೋಗಿಗಳನ್ನು ತಿಂಡಿ, ಊಟ ಮತ್ತು ರಾತ್ರಿಯ ಭೋಜನದ ಸಮಯದಲ್ಲಿ ಮಾತ್ರ ಭೇಟಿಯಾಗಬಹುದಾಗಿದೆ.

ಇಲ್ಲಿ ರೋಗಿಗಳಿಗೆ ಚಿಕಿತ್ಸೆಯ ಒಂದು ಭಾಗವಾಗಿ ಬೆಳಿಗ್ಗೆ 5:30ಕ್ಕೆ ಯೋಗ ಮತ್ತು ಪ್ರಾಣಾಯಾಮದೊಂದಿಗೆ ದಿನಚರಿ ಪ್ರಾರಂಭವಾಗುತ್ತದೆ. ನಂತರ 7 ಗಂಟೆಗೆ ದೇಶಿ ಗೋವಿನಿಂದ ತಯಾರಿಸಲಾದ ಪಂಚಗವ್ಯವನ್ನು ನೀಡಲಾಗುತ್ತದೆ. ಸುಮಾರು 9 ಗಂಟೆಗೆ ಗೋಮೂತ್ರದೊಂದಿಗೆ ಕೆಲವೊಂದು ಆಯುರ್ವೇದ ಮಾತ್ರೆಗಳನ್ನು ಸೇವಿಸಲು ನೀಡಲಾಗುತ್ತದೆ. 9 ರಿಂದ 10 ಗಂಟೆಯವರೆಗೆ ದೇಹದ ಕ್ಯಾನ್ಸರ್ ಭಾಗದ ಮೇಲೆ ಗೋವಿನ ಸಗಣಿ, ಮೂತ್ರವನ್ನು ಲೇಪಿಸಿ ಬಿಸಿಲಿನಲ್ಲಿ ಕುಳ್ಳಿರಿಸಲಾಗುತ್ತದೆ. 10 ಗಂಟೆಗೆ ಸರಿಯಾಗಿ ಔಷಧಿ ಸಸ್ಯಗಳಿಂದ ತಯಾರಿಸಲಾದ ಕಷಾಯವನ್ನು ನೀಡಲಾಗುತ್ತದೆ. ಮಧ್ಯಾಹ್ನ 11 ರಿಂದ 1 ಗಂಟೆಯ ನಡುವೆ ಊಟ, ಊಟದ ನಂತರ ಸೇವಿಸಲು ಆಯುರ್ವೇದ ಮಾತ್ರೆಗಳನ್ನು ನೀಡಲಾಗುತ್ತದೆ. 2 ರಿಂದ 3 ಗಂಟೆಯವರೆಗೆ ಸಭಾಂಗಣದಲ್ಲಿ ರೋಗಿಯ ಊಟ ಮತ್ತು ಚಿಕಿತ್ಸೆಗೆ ಸಂಬಂಧಿಸಿದ ಪ್ರಶ್ನೋತ್ತರಗಳ ಚರ್ಚೆ ಇರುತ್ತದೆ. ಸುಮಾರು 3:30ಕ್ಕೆ ಕಾಡಾ ಎಂದು ಕರೆಯಲಾಗುವ ಕಷಾಯವನ್ನು ವಿತರಿಸಲಾಗುತ್ತದೆ. ಸಂಜೆ 5 ರಿಂದ 6 ಗಂಟೆಯ ನಡುವೆ ಊಟವಿದ್ದು ನಂತರ ಆಯುರ್ವೇದ ಮಾತ್ರೆಗಳನ್ನು ಸೇವಿಸಬೇಕಾಗುತ್ತದೆ. ರಾತ್ರಿ 8 ರಿಂದ 9:30 ರವರೆಗೆ ಸತ್ಸಂಗ, ಕೀರ್ತನೆ ಇದ್ದು ಕುಡಿಯಲು ಹಾಲನ್ನು ನೀಡಲಾಗುತ್ತದೆ. ಇಲ್ಲಿಗೆ ರೋಗಿಯ ಚಿಕಿತ್ಸಾ ದಿನಚರಿ ಮುಗಿಯುತ್ತದೆ. ಇದೇ ದಿನಚರಿ ಸರಿಯಾಗಿ 10 ದಿನಗಳವರೆಗೆ ಮುಂದುವರೆಯುತ್ತದೆ. 11ನೇ ದಿನ ಸುಮಾರು 2500 ರಿಂದ 4000 ರೂಪಾಯಿವರೆಗಿನ ಒಂದು ತಿಂಗಳ ಔಷಧಿಯನ್ನು ತೆಗೆದುಕೊಂಡು ರೋಗಿಗಳು ಮನೆಗೆ ಮರಳಬಹುದಾಗಿದೆ. ಮನೆಯಲ್ಲಿಯೇ ಪಥ್ಯದೊಂದಿಗೆ ಚಿಕಿತ್ಸೆಯನ್ನು ಕನಿಷ್ಠ ಒಂದು ವರ್ಷ ಮುಂದುವರೆಸಬೇಕಿದೆ. ಔಷಧಿಗಳು ಬೇಕಾದಲ್ಲಿ ಪ್ರತಿ ತಿಂಗಳು ಇಲ್ಲವೇ ಎರಡು ತಿಂಗಳಿಗೊಮ್ಮೆ ಬಂದು ತೆಗೆದುಕೊಂಡು ಹೋಗಬೇಕಿದೆ. ಇಲ್ಲಿ ಕೋಟ್ಯಾಧಿಪತಿಯಿಂದ ಹಿಡಿದು ಕಡುಬಡವನಿಗೂ ಸರಿಸಮಾನವಾದ ಚಿಕಿತ್ಸೆ ಮತ್ತು ಏಕರೂಪ ನಿಯಮಗಳನ್ನು ಅಳವಡಿಸಲಾಗಿದ್ದು, ಯಾವುದೇ ವಿ.ಐ.ಪಿ. ಸಂಸ್ಕೃತಿಗೆ ಅವಕಾಶವನ್ನು ನೀಡಲಾಗಿಲ್ಲ. ರೋಗಿಗಳಿಗೆ ಮೊಬೈಲ್ ಬಳಕೆಯನ್ನು ನಿಷೇಧಿಸಿದ್ದು, ಸಮನ್ವಯ ಕಾಯ್ದುಕೊಳ್ಳಲು ವೈದ್ಯರು ಮತ್ತು ಸಿಬ್ಬಂದಿಗಳು ರೋಗಿಗಳೊಂದಿಗೆ ಆಹಾರವನ್ನು ಸೇವಿಸುವುದು ವಿಶೇಷವಾದುದಾಗಿದೆ.

ಬಡ ರೋಗಿಗಳಿಗೆ ಬೇಕಾದಲ್ಲಿ ಕಚೇರಿಯಿಂದ 14 ಕಿ.ಮೀ. ದೂರದಲ್ಲಿರುವ ವಲ್ಸಾಡ ರೈಲ್ವೆ ನಿಲ್ದಾಣದಿಂದ ತೆರಳಲು ಸಂಪೂರ್ಣ ಉಚಿತ ಟಿಕೆಟ್ ಮತ್ತು ಜೊತೆಗಾರನಿಗೆ ಶೇಕಡಾ 50 ರಿಯಾಯಿತಿಯಲ್ಲಿ ಟಿಕೆಟ್ ನೀಡಲಾಗುತ್ತದೆ. ಹೀಗೆ ಪ್ರತಿನಿತ್ಯ ದೇಶಾದ್ಯಂತ ಇರುವ ಅತಿದೊಡ್ಡ ಆಸ್ಪತ್ರೆಗಳಲ್ಲಿ ಲಕ್ಷಾಂತರ ರೂಪಾಯಿಗಳನ್ನು ವ್ಯರ್ಥ ಖರ್ಚುಮಾಡಿ, ಸಾವಿನ ಮನೆಯ ಕದ ತಟ್ಟಿ ಬಂದಂತಹ ನೂರಾರು ರೋಗಿಗಳು ಇಲ್ಲಿಗೆ ಬಂದು ಸುಧಾರಿಸಿ ಹಿಂದಿರುಗುವಾಗ ಅವರ ಮುಖದಲ್ಲಿ ಮಂದಹಾಸ ಮಿನುಗುವುದು ಸಾಮಾನ್ಯವಾದುದಾಗಿದೆ.

13-08-2024
Hosadiganta Pg 06

For more information visit
University Library Website
Web - uasbagrilibindia.org
E-mail- librarian@uasbangalore.edu.in